# ಪತ್ರಿಕಾ ಪ್ರಕಟಣೆಯ ವಿಷಯ

2022–23ನೇ ಸಾಲಿನಲ್ಲಿ ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳ 5 ಮತ್ತು 8 ನೇ ತರಗತಿ ವಿದ್ಯಾರ್ಥಿಗಳಿಗೆ **ದಿನಾಂಕ: 13.03.2023 ರಿಂದ** ನಿಗದಿಪಡಿಸಲಾಗಿದ್ದ ಮೌಲ್ಯಾಂಕನವನ್ನು ಘನ ಉಚ್ಚ ನ್ಯಾಯಾಲಯದ ಆದೇಶದಂತೆ ಮುಂದೂಡಲಾಗಿತ್ತು.

ಪ್ರಸ್ತುತ ಘನ ಉಚ್ಚ ನ್ಯಾಯಾಲಯವು ದಿನಾಂಕ: 27.03.2023 ರಿಂದ 5 ಮತ್ತು 8 ನೇ ತರಗತಿ ವಿದ್ಯಾರ್ಥಿಗಳಿಗೆ ಮೌಲ್ಯಾಂಕನವನ್ನು ನಡೆಸಲು ಅವಕಾಶ ಕಲ್ಪಿಸಿದ್ದು, ಅದರಂತೆ 5 ನೇ ತರಗತಿ ವಿದ್ಯಾರ್ಥಿಗಳಿಗೆ **ದಿನಾಂಕ: 27.03.2023 ರಿಂದ 30.03.2023 ರವರೆಗೆ** ಮತ್ತು 8 ನೇ ತರಗತಿ ವಿದ್ಯಾರ್ಥಿಗಳಿಗೆ **ದಿನಾಂಕ: 27.03.2023 ರಿಂದ 01.04.2023 ರವರೆಗೆ** ಮೌಲ್ಯಾಂಕನವನ್ನು ನಡೆಸಲಾಗುತ್ತಿದೆ.

ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಆಯಾ ಶಾಲೆಗಳನ್ನೇ ಮೌಲ್ಯಾಂಕನ ಕೇಂದ್ರಗಳಾಗಿ ಪರಿಗಣಿಸಿದೆ.

ಈ ಮೌಲ್ಯಾಂಕನವು ವಿದ್ಯಾರ್ಥಿಗಳ ಕಲಿಕಾ ಮಟ್ಟ, ಕಲಿಕಾ ನ್ಯೂನ್ಯತೆಗಳು ಹಾಗೂ ಯಾವ ವಿಷಯದ ಕಲಿಕೆಯಲ್ಲಿ ಎಷ್ಟು ಹಿನ್ನಡೆಯುಂಟಾಗಿದೆ ಎಂಬುದನ್ನು ತಿಳಿಯುವುದಾಗಿದೆ. ಈ ಮೌಲ್ಯಾಂಕನದಲ್ಲಿ ಯಾವುದೇ ವಿದ್ಯಾರ್ಥಿಯನ್ನು ಅನುತ್ತೀರ್ಣಗೊಳಿಸುವುದಿಲ್ಲ ಹಾಗೂ ಮುಂದಿನ ತರಗತಿಗೆ ತೇರ್ಗಡೆಗೊಳಿಸಲಾಗುವುದು.

ಈ ಮೌಲ್ಯಾಂಕನದ ಫಲಿತಾಂಶವನ್ನು ವಿದ್ಯಾರ್ಥಿಗಳಿಗೆ ಮಾತ್ರ ತಿಳಿಸಲಾಗುವುದು. ಆ ಮೂಲಕ ಫಲಿತಾಂಶದ ಗೌಪ್ಯತೆಯನ್ನು ಕಾಪಾಡಲಾಗುವುದು.

## <u>ಮಾರ್ಚ್ –2023ರ 5 ಮತ್ತು 8ನೇ ತರಗತಿ ಮೌಲ್ಯಾಂಕನ (SA-2) ಕಾರ್ಯದ ಪರಿಷ್ಕೃತ ವೇಳಾಪಟ್ಟಿ</u>

| ದಿನಾಂಕ ಮತ್ತು ವಾರ | ವಿಷಯ | | ಸಮಯ | | ಒಟ್ಟು ಅವಧಿ | ಗರಿಷ್ಠ ಅಂಕಗಳು |
|---|---|---|---|---|---|---|
| | 5ನೇ ತರಗತಿ | 8ನೇ ತರಗತಿ | | | | |
| **27.03.2023**<br>**(ಸೋಮವಾರ)** | **ಪ್ರಥಮ ಭಾಷೆ**<br>ಕನ್ನಡ<br>ಇಂಗ್ಲಿಷ್<br>ಹಿಂದಿ<br>ಉರ್ದು<br>ಮರಾಠಿ<br>ತೆಲುಗು<br>ತಮಿಳು | **ಪ್ರಥಮ ಭಾಷೆ**<br>ಕನ್ನಡ<br>ಇಂಗ್ಲಿಷ್<br>ಇಂಗ್ಲಿಷ್ (NCERT)<br>ಹಿಂದಿ<br>ಉರ್ದು<br>ಮರಾಠಿ<br>ತೆಲುಗು<br>ತಮಿಳು<br>ಸಂಸ್ಕೃತ | ಮ.2.30 | ಮ.4.30 | 2.00 ಗಂಟೆ | 40<br>40<br>40<br>40<br>40<br>40<br>40<br>40<br>40 |
| **28.03.2023**<br>**(ಮಂಗಳವಾರ)** | **ದ್ವಿತೀಯ ಭಾಷೆ**<br>ಇಂಗ್ಲಿಷ್<br>ಕನ್ನಡ | **ದ್ವಿತೀಯ ಭಾಷೆ**<br>ಇಂಗ್ಲಿಷ್<br>ಕನ್ನಡ | ಮ.2.30 | ಮ.4.30 | 2.00 ಗಂಟೆ | 40<br>40 |
| **29.03.2023**<br>**(ಬುಧವಾರ)** | **ಕೋರ್ ವಿಷಯ:**<br>ಪರಿಸರ ಅಧ್ಯಯನ | **ತೃತೀಯ ಭಾಷೆ**<br>ಹಿಂದಿ<br>ಹಿಂದಿ (NCERT)<br>ಕನ್ನಡ<br>ಇಂಗ್ಲಿಷ್<br>ಅರೇಬಿಕ್<br>ಪರ್ಷಿಯನ್<br>ಉರ್ದು<br>ಸಂಸ್ಕೃತ<br>ಕೊಂಕಣಿ<br>ತುಳು | ಮ.2.30 | ಮ.4.30 | 2.00 ಗಂಟೆ | 40<br>40<br>40<br>40<br>40<br>40<br>40<br>40<br>40<br>40 |
| **30.03.2023**<br>**(ಗುರುವಾರ)** | **ಕೋರ್ ವಿಷಯ:**<br>ಗಣಿತ | **ಕೋರ್ ವಿಷಯ:**<br>ಗಣಿತ | ಬೆ.10.30 | ಮ.12.30 | 2.00 ಗಂಟೆ | 40 |

| | | | | | | |
|---|---|---|---|---|---|---|
| **31.03.2023** (ಶುಕ್ರವಾರ) | ಪರೀಕ್ಷೆ ಇರುವುದಿಲ್ಲ | **ಕೋರ್ ವಿಷಯ:** ವಿಜ್ಞಾನ | ಮ.2.30 | ಮ.4.30 | 2.00 ಗಂಟೆ | 40 |
| **01.04.2023** (ಶನಿವಾರ) | ಪರೀಕ್ಷೆ ಇರುವುದಿಲ್ಲ | **ಕೋರ್ ವಿಷಯ:** ಸಮಾಜ ವಿಜ್ಞಾನ | ಮ.2.30 | ಮ.4.30 | 2.00 ಗಂಟೆ | 40 |

- ಮಂಡಲಿ ವತಿಯಿಂದ ಮೌಲ್ಯಾಂಕನ ನಡೆಸುವ ವಿಷಯಗಳನ್ನು ಹೊರತುಪಡಿಸಿ ಉಳಿದೆಲ್ಲಾ ವಿಷಯಗಳಿಗೂ ಮಂಡಲಿಯಿಂದ ನಿಗದಿಪಡಿಸಿರುವ ದಿನಾಂಕಕ್ಕಿಂತ ಮೊದಲೇ ತಮ್ಮ ಶಾಲಾ ಹಂತದಲ್ಲಿಯೇ ಮೌಲ್ಯಾಂಕನ ನಡೆಸುವುದು. (ಉದಾ: ದೈಹಿಕ ಶಿಕ್ಷಣ, ಇತರೆ ವಿಷಯಗಳು)
- 8ನೇ ತರಗತಿಯಲ್ಲಿ ಪ್ರಥಮ ಭಾಷೆ – ಇಂಗ್ಲೀಷ್ (NCERT) ಮತ್ತು ತೃತೀಯ ಭಾಷೆ – ಹಿಂದಿ (NCERT) ವಿಷಯಗಳು ಆದರ್ಶ ವಿದ್ಯಾಲಯಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯವಾಗುತ್ತವೆ.
- ವಿಶೇಷ ಶಾಲೆಗಳ ವಿದ್ಯಾರ್ಥಿಗಳಿಗೆ ಮಂಡಲಿಯಿಂದ ಸರಬರಾಜು ಮಾಡುವ ಪ್ರಶ್ನೋತ್ತರ ಪತ್ರಿಕೆಗಳನ್ನೇ ಬಳಸಿ ಶಾಲಾ ಹಂತದಲ್ಲಿ ಹಿಂದಿನ ಸಾಲುಗಳಲ್ಲಿ ನಡೆಸಿದಂತೆ ಮೌಲ್ಯಾಂಕನ ನಡೆಸುವುದು.
- **ದಿನಾಂಕ: 30.03.2023 ರಂದು ನಡೆಯುವ ಗಣಿತ ವಿಷಯದ ಮೌಲ್ಯಾಂಕನದ ಅವಧಿಯನ್ನು ಬೆಳಗ್ಗೆ 10.30 ರಿಂದ ಮಧ್ಯಾಹ್ನ 12.30 ರವರೆಗೆ ನಿಗದಿಪಡಿಸಲಾಗಿದೆ ಹಾಗೂ ಉಳಿದ ಎಲ್ಲಾ ದಿನಗಳ ಮೌಲ್ಯಾಂಕನವು ಮಧ್ಯಾಹ್ನ 2.30 ರಿಂದ 4.30 ರವರೆಗೆ ನಡೆಯಲಿದೆ. ಈ ವಿಷಯವನ್ನು ಶಾಲಾ ಮುಖ್ಯ ಶಿಕ್ಷಕರು ಎಲ್ಲಾ ವಿದ್ಯಾರ್ಥಿಗಳಿಗೆ ತಿಳಿಸುವುದು.**

**ಪ್ರಶ್ನೆಪತ್ರಿಕೆ ಸ್ವರೂಪ**

- 5 ಮತ್ತು 8 ನೇ ತರಗತಿಯ ವಿದ್ಯಾರ್ಥಿಗಳಿಗೆ ದಿನವೊಂದಕ್ಕೆ ಒಂದು ವಿಷಯದಂತೆ ಮೌಲ್ಯಾಂಕನ ನಡೆಸಲಾಗುತ್ತಿದೆ.
- ಪ್ರತಿ ವಿಷಯದ ಮೌಲ್ಯಾಂಕನಕ್ಕೆ **2 ಗಂಟೆಗಳ** ಅವಧಿಯನ್ನು ನಿಗದಿಪಡಿಸಲಾಗಿದೆ.
- ತರಗತಿವಾರು ಪ್ರತಿ ವಿಷಯಕ್ಕೆ 40 ಅಂಕಗಳ ಲಿಖಿತ ಮೌಲ್ಯಾಂಕನಕ್ಕೆ 28 ಪ್ರಶ್ನೆಗಳನ್ನೊಳಗೊಂಡ (1 ಅಂಕದ 20 ಬಹುಆಯ್ಕೆ ಪ್ರಶ್ನೆಗಳು, 2 ಅಂಕಗಳ 5, 3 ಅಂಕಗಳ 2 ಹಾಗೂ 4 ಅಂಕಗಳ 1 ವಿವರಣಾತ್ಮಕ ಪ್ರಶ್ನೆಗಳು) ಪ್ರತ್ಯೇಕ ಪ್ರಶ್ನೋತ್ತರ ಪತ್ರಿಕೆಯನ್ನು ನೀಡಲಾಗುತ್ತದೆ.
- 10 ಅಂಕಗಳ ಮೌಖಿಕ ಮೌಲ್ಯಾಂಕನವನ್ನು ಶಾಲಾ ಹಂತದಲ್ಲಿಯೇ ನಿರ್ವಹಿಸಲು ತಿಳಿಸಲಾಗಿದೆ.
- **40 ಅಂಕಗಳ ಲಿಖಿತ ಮೌಲ್ಯಾಂಕನ ಮತ್ತು 10 ಅಂಕಗಳ ಮೌಖಿಕ ಮೌಲ್ಯಾಂಕನದಲ್ಲಿ ವಿದ್ಯಾರ್ಥಿಗಳು ಗಳಿಸಿದ ಅಂಕಗಳನ್ನು 20 ಅಂಕಗಳಿಗೆ ಪರಿವರ್ತಿಸುವುದು.**
- ವಿದ್ಯಾರ್ಥಿಗಳನ್ನು ಮೌಲ್ಯಾಂಕನಕ್ಕೆ ಸಿದ್ಧಗೊಳಿಸಲು ಮಾದರಿ ಪ್ರಶ್ನೋತ್ತರ ಪತ್ರಿಕೆಗಳನ್ನು ಮತ್ತು ಮೌಲ್ಯಾಂಕನಕ್ಕೆ ಒಳಪಡಿಸಿರುವ ಪಠ್ಯಪುಸ್ತಕದಲ್ಲಿನ ಘಟಕಗಳ ವಿವರಗಳನ್ನು ಮಂಡಲಿಯ ವೆಬ್‌ಸೈಟ್‌ನಲ್ಲಿ ಈಗಾಗಲೇ ಪ್ರಕಟಿಸಲಾಗಿದೆ.

ಕಾರ್ಯನಿರ್ವಾಹಕ ನಿರ್ದೇಶಕರು

ಕೆ.ಎಸ್.ಕ್ಯು.ಎ.ಎ.ಸಿ.